## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 1139/2025** **PW- 1**

ದಿಃ **02.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿಸವಾಲುಃ ಆರೋಪಿ ಪರ ಶ್ರೀಮತಿ ಮಂಗಳಾ (LADC) ವಕೀಲರಿಂದಃ**

ಪೊಲಿಸರು ತಲವಾರ ಇದೆ ಅಂತಾ ಹೇಳಿದ್ದಕ್ಕೆ ನಾನು ತಲವಾರ ಇದೆ ಅಂತಾ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಪೊಲಿಸರು ಪಂಚನಾಮೆಯಲ್ಲಿ ತಲವಾರ ಇದೆ ಅಂತಾ ಹೇಳಿ ಪಂಚನಾಮಾ ಬರೆದ್ದು ಅವರು ಹೇಳಿದ ಹಾಗೆ ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸಾಕ್ಷಿ ತನಗೆ ಎಲ್ಲಾ ಗೊತ್ತಿದ್ದೆ ಸಾಕ್ಷಿ ನುಡಿದಿದ್ದೇನೆ ಎಂದು ನುಡಿಯುತ್ತಾರೆ. ನಾನು ಮುಖ್ಯ ಹೇಳಿಕೆಯಲ್ಲಿ ತಲವಾರ 18 ಇಂಚು ಇತ್ತು ಅಂತಾ ಅಂದಾಜಿನ ಮೇಲೆ ಹೇಳಿದ್ದೇನೆ. ಒಂದು ಇಂಚಗೆ ಎಷ್ಟು ಸೆಂ. ಮೀ. ಆಗುತ್ತದೆ ಅಂತಾ ಗೊತ್ತಿಲ್ಲ. ಒಂದು ಇಂಚಗೆ 2.54 ಸೆಂ. ಮೀ. ಬರುವ ಬಗ್ಗೆ ಗೊತ್ತಿಲ್ಲ. ಮು ಮಾ 1 ತಲವಾರ ಅಲ್ಲವೇ ಅಲ್ಲ ಎಂದರೆ ಸರಿಯಲ್ಲ. ಮು ಮಾ 1 ಎಳನೀರು ಕತ್ತರಿಸುವ ಒಂದು ಆಯುಧ. ಅದು ತಲವಾರ ಅಲ್ಲ ಎಂದರೆ ಸರಿಯಲ್ಲ. ಚಾಸಾಃ 6 ರವರು ನವನಗರ ಮಾರ್ಕೆಟ ಹತ್ತಿರ ಇದ್ದುಕೊಂಡು ನನಗೆ ಪೊನ್ ಮಾಡಿದರು. ಪೊನ್ ಮಾಡಿದಾಗ ನಾನು ಅಂಗಡಿಯಲ್ಲಿದ್ದೆ. ಚಾಸಾಃ 6 ರವರು ಅಂಗಡಿಗೆ ಬಂದು ನನ್ನನ್ನು ಕರೆದುಕೊಂಡು ಹೋದರು. ನಾನು ಇದ್ದ ಸ್ಥಳದಿಂದ ಮಲ್ಲನಗೌಡ್ರ ಛಾಳಕ್ಕೆ ಹೋಗಲು 10 ನಿಮಿಷ ಬೇಕು. ಚಾಸಾಃ 6 ರವರು ನನ್ನನ್ನು ಕರೆಯಲು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನನ್ನು ಈ ಪ್ರಕರಣ ಅಲ್ಲದೇ ಬೇರೆ ಪ್ರಕರಣದಲ್ಲಿಯೂ ಸಹ ಪಂಚರಾಗಿ ಪೊಲಿಸರು ಕರೆದಿದ್ದರು ಎಂದರೆ ಸರಿಯಲ್ಲ. ಆರೋಪಿ 18 ಇಂಚನ ತಲವಾರ ಇಟ್ಟುಕೊಂಡು ಸಾರ್ವಜನಿಕರಿಗೆ ಹೆದರಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಮುದ್ದೆಮಾಲಿಗೂ ಯಾವದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(**ಶ್ರೀ ರಮೇಶ ಎಸ್ ಗಾಣಿಗೇರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**